# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು - 572 103**

**ಸಂಖ್ಯೆ: ತುವಿ: ಶೈವಿ:ಸ್ನಾ.ಪ್ರ.ಶು: 2024-25:/1273** **ದಿನಾಂಕ: 09.05.2024**

## ಅಧಿಸೂಚನೆ

**ವಿಷಯ :** ತುಮಕೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ವಿವಿಧ ಸ್ನಾತಕ ಪದವಿ ಕೋರ್ಸುಗಳಿಗೆ 2024-25ನೇ ಶೈಕ್ಷಣಿಕ ಸಾಲಿನ ಪ್ರವೇಶ ಶುಲ್ಕವನ್ನು ನಿಗದಿಪಡಿಸಿರುವ ಕುರಿತು.

**ಉಲ್ಲೇಖ:** 1) ವಿಶ್ವವಿದ್ಯಾನಿಲಯದ ಶುಲ್ಕ ಸಮಿತಿಯ ಸಭಾ ನಿರ್ಣಯದ ದಿನಾಂಕ:10.04.2024.
2) ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ:08.05.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಸಂಯೋಜಿತ ಕಾಲೇಜುಗಳಲ್ಲಿ 2024-25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಲ್ಲೇಖ (01)ರ ಪ್ರವೇಶಾತಿ ಶುಲ್ಕದ ಸಮಿತಿಯ ಸಭಾ ನಿರ್ಣಯದಂತೆ ಹಾಗೂ ಉಲ್ಲೇಖ (02)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಿ ಅಧಿಸೂಚಿಸಲಾಗಿದೆ.

**I ಸ್ನಾತಕ ಕೋರ್ಸುಗಳ ಪ್ರಥಮ ವರ್ಷದ ಶುಲ್ಕಗಳ ವಿವರ :**

| ಕ್ರ ಸಂ. | ಶುಲ್ಕದ ವಿವರ | B.A. | B. Com/ B.B.A/ B.S.W | B.Sc/ B.Sc FAD/ B.Voc | B.C.A. | B.Ed. | B.A. (Int.) | B.F.A./ B.V.A. | B.Sc Fire & Safety |
|---|---|---|---|---|---|---|---|---|---|
| 1 | ಪ್ರವೇಶ ಶುಲ್ಕ | 60 | 60 | 60 | 60 | 60 | 60 | 60 | 60 |
| 2 | ನೋಂದಣಿ ಶುಲ್ಕ | 187 | 187 | 187 | 187 | 187 | 187 | 187 | 170 |
| 3 | ಕ್ರೀಡಾ ಶುಲ್ಕ * | 589 | 1177 | 589 | 1177 | 589 | 589 | 589 | 535 |
| 4 | ಪಠ್ಯೇತರ ಚಟುವಟಿಕಾ ಶುಲ್ಕ | 60 | 60 | 60 | 60 | 60 | 60 | 60 | 55 |
| 5 | ರಾಷ್ಟ್ರೀಯ ಸೇವಾ ಯೋಜನಾ ಶುಲ್ಕ | 44 | 44 | 44 | 44 | 44 | 44 | 44 | 44 |
| 6 | ಕೆರಿಯರ್ ಗೈಡೆನ್ಸ್ ಫಂಡ್ | 22 | 22 | 22 | 22 | 22 | 22 | 22 | 22 |
| 7 | ವಿ.ವಿ. ಅಭಿವೃದ್ಧಿ ಶುಲ್ಕ | 422 | 534 | 422 | 3714 | 1362 | 187 | 1242 | 13552 |
| 8 | ಸಾದಿಲ್ವಾರು ಶುಲ್ಕ | 22 | 22 | 22 | 22 | 22 | 22 | 22 | 22 |
| 9 | ಭಾರತೀಯ ರೆಡ್ ಕ್ರಾಸ್ ಶುಲ್ಕ | 60 | 60 | 60 | 60 | 60 | 60 | 60 | 55 |
| 10 | ಭಾರತ್ ಸ್ಕೌಟ್ಸ್ & ಗೈಡ್ಸ್ ಶುಲ್ಕ | 60 | 60 | 60 | 60 | 60 | 60 | 60 | 55 |
| 11 | ಪ್ರೊಸೆಸಿಂಗ್ ಶುಲ್ಕ | 474 | 474 | 474 | 474 | 474 | 474 | 474 | 430 |
| | ಒಟ್ಟು ರೂ. | **2000** | **2700** | **2000** | **5880** | **2940** | **1765** | **2820** | **15000** |

* ಸರ್ಕಾರದ ಆದೇಶ ಸಂಖ್ಯೆ:ಸಕಇ:357: ಜಿ.ಎಂ.ಎಸ್.2012 ದಿನಾಂಕ:22.11.2012ಪ್ರಕಾರ ನಿಗದಿಪಡಿಸಿರುವ ಶುಲ್ಕಗಳು

## II ಸ್ನಾತಕ ಕೋರ್ಸುಗಳ ದ್ವಿತೀಯ ಮತ್ತು ತೃತೀಯ ವರ್ಷದ ಶುಲ್ಕಗಳ ವಿವರ :

| ಕ್ರ ಸಂ. | ಶುಲ್ಕದ ವಿವರ | B.A. | B.Com/ B.B.A/ B.S.W. | B.Sc/ B.Sc FAD/ B.Voc | B.C.A. | B.Ed. | B.A. (Int.) | B.F.A./ B.V.A. | B.Sc Fire & Safety |
|---|---|---|---|---|---|---|---|---|---|
| 1 | ಪ್ರವೇಶ ಶುಲ್ಕ | 60 | 60 | 60 | 60 | 60 | 60 | 60 | 55 |
| 2 | ಕೌಶಲ್ಯಾಭಿವೃದ್ಧಿ ಶುಲ್ಕ | 184 | 184 | 184 | 184 | 184 | 184 | 184 | 184 |
| 3 | ಕ್ರೀಡಾ ಶುಲ್ಕ * | 589 | 1177 | 589 | 1177 | 589 | 589 | 589 | 535 |
| 4 | ಪಠ್ಯೇತರ ಚಟುವಟಿಕಾ ಶುಲ್ಕ | 60 | 60 | 60 | 60 | 60 | 60 | 60 | 55 |
| 5 | ರಾಷ್ಟ್ರೀಯ ಸೇವಾ ಯೋಜನಾ ಶುಲ್ಕ | 44 | 44 | 44 | 44 | 44 | 44 | 44 | 44 |
| 6 | ಕೆರಿಯರ್ ಗೈಡೆನ್ಸ್ ಫಂಡ್ | 22 | 22 | 22 | 22 | 22 | 22 | 22 | 22 |
| 7 | ವಿ.ವಿ. ಅಭಿವೃದ್ಧಿ ಶುಲ್ಕ | 419 | 531 | 419 | 3711 | 1359 | 189 | 1239 | 13973 |
| 8 | ಸಾದಿಲ್ವಾರು ಶುಲ್ಕ | 22 | 22 | 22 | 22 | 22 | 22 | 22 | 22 |
| 9 | ಭಾರತೀಯ ರೆಡ್ ಕ್ರಾಸ್ ಶುಲ್ಕ | 60 | 60 | 60 | 60 | 60 | 60 | 60 | 55 |
| 10 | ಭಾರತ್ ಸ್ಕೌಟ್ಸ್ & ಗೈಡ್ಸ್ ಶುಲ್ಕ | 60 | 60 | 60 | 60 | 60 | 60 | 60 | 55 |
| | **ಒಟ್ಟು ರೂ.** | **1520** | **2220** | **1520** | **5400** | **2460** | **1290** | **2340** | **15000** |

*ಕೌಶಲ್ಯಾಭಿವೃದ್ಧಿ ಶುಲ್ಕವು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

* ಸರ್ಕಾರದ ಆದೇಶ ಸಂಖ್ಯೆ:ಸಕಇ:357: ಜಿ.ಎಂ.ಎಸ್ 2012 ದಿನಾಂಕ:22.11.2012 ರ ಪ್ರಕಾರ ನಿಗದಿಪಡಿಸಿರುವ ಶುಲ್ಕಗಳು

## III. ಅರ್ಹತಾ ಶುಲ್ಕ (Eligibality Fee):

| | | |
|---|---|---|
| ಅ) | ಹೊರ ರಾಜ್ಯದ ವಿದ್ಯಾರ್ಥಿಗಳಿಗೆ | ರೂ. 3300 |
| ಆ) | ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗೆ | ರೂ. 4400 |
| ಇ) | ವಿದೇಶಿ ವಿದ್ಯಾರ್ಥಿಗಳಿಗೆ | ರೂ. 5500 |

- **ಪ್ರೊಸೆಸಿಂಗ್ ಶುಲ್ಕ ಮತ್ತು ಅರ್ಹತಾ ಶುಲ್ಕಗಳು ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಪದವಿ ಕೋರ್ಸ್ ಹೊರತುಪಡಿಸಿ ಉಳಿದ ಎಲ್ಲಾ ಕೋರ್ಸುಗಳಿಗೂ ಅನ್ವಯವಾಗುತ್ತದೆ.**
- **ವರ್ಗಾವಣೆ ಮೂಲಕ ಬೇರೆ ಕಾಲೇಜಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಜೊತೆಗೆ ಪ್ರೊಸೆಸಿಂಗ್ ಶುಲ್ಕವನ್ನು ಕಾಲೇಜಿನವರು ಕಡ್ಡಾಯವಾಗಿ ಪಡೆಯತಕ್ಕದ್ದು.**

## IV ಇತರೆ ಶುಲ್ಕಗಳು :

| | | |
|---|---|---|
| 1 | ಮರು ಪ್ರವೇಶ | ರೂ. 1100 |
| 2 | ವರ್ಗಾವಣೆ ಪ್ರವೇಶ : ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿಗೆ | ರೂ. 2200 |
| 3 | ಭಾಷೆ ಮತ್ತು ಐಚ್ಛಿಕ ವಿಷಯಗಳ ಬದಲಾವಣೆ ಪ್ರತಿ ವಿಷಯಕ್ಕೆ | ರೂ. 1100 |
| 4 | ಕೋರ್ಸು ಬದಲಾವಣೆ | ರೂ. 1100 |
| 5 | ದಂಡ ಶುಲ್ಕ | ರೂ. 1100 |

ಸೂಚನೆ:

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ವಿನಾಯಿತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳನ್ನು ಪರಿಶೀಲಿಸಿತು. ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ ಸಕಇ 178 ಪಕವಿ 2015 ದಿನಾಂಕ 31.12.2015 ರಲ್ಲಿ **ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಮರುಪಾವತಿಸಲಾಗುವ ಶುಲ್ಕಗಳನ್ನು ಕೆಳಕಂಡಂತೆ ವಿಭಜಿಸಿ ಆದೇಶ ಹೊರಡಿಸಿರುತ್ತದೆ.**

**ಮಂಜೂರಾತಿ / ಮರು ಪಾವತಿಸಬೇಕಾದ ಶುಲ್ಕಗಳು**

| ಕುಟುಂಬದ ವಾರ್ಷಿಕ ವರಮಾನ ರೂ. 2.50ಲಕ್ಷದೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು | ಕುಟುಂಬದ ವಾರ್ಷಿಕ ವರಮಾನ ರೂ. 2.50 ಗಳಿಂದ ರೂ. 10.00 ಲಕ್ಷಗಳ ಮಿತಿಯೊಳಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು |
|---|---|
| 1. ಪರೀಕ್ಷಾ ಶುಲ್ಕ | 1. ಪರೀಕ್ಷಾ ಶುಲ್ಕ |
| 2. ಪ್ರವೇಶ/ನೋಂದಣಿ ಶುಲ್ಕ | 2. ಪ್ರವೇಶ/ನೋಂದಣಿ ಶುಲ್ಕ |
| 3. ಬೋಧನಾ ಶುಲ್ಕ | 3. ಬೋಧನಾ ಶುಲ್ಕ |
| 4. ಪ್ರಯೋಗಾಲಯ ಶುಲ್ಕ (ವಿಜ್ಞಾನ/ವೈದ್ಯಕೀಯ/ತಾಂತ್ರಿಕ ಕೋರ್ಸುಗಳಿಗೆ) | —— |
| 5. ಕ್ರೀಡಾ ಶುಲ್ಕ | —— |
| 6. ಗ್ರಂಥಾಲಯ ಶುಲ್ಕ | —— |
| 7. ವೈದ್ಯಕೀಯ ಪರೀಕ್ಷಾ ಶುಲ್ಕ | —— |
| 8. ಇತರೆ ಕಡ್ಡಾಯ ಶುಲ್ಕಗಳು ಗರಿಷ್ಠ ರೂ. 500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೋ ಅದು | 4. ಇತರೆ ಕಡ್ಡಾಯ ಶುಲ್ಕಗಳು ಗರಿಷ್ಠ ರೂ. 500/- ಅಥವಾ ವಾಸ್ತವ ಶುಲ್ಕ ಯಾವುದು ಕಡಿಮೆಯೋ ಅದು |

2. ಸಾದಿಲ್ವಾರು ಶುಲ್ಕ ರೂ.11/- ಗಳನ್ನು ಕಾಲೇಜು ಹಂತದಲ್ಲೇ ಉಳಿಸಿಕೊಳ್ಳತಕ್ಕದ್ದು.
3. ಸರ್ಕಾರಿ ಆದೇಶ ಸಂಖ್ಯೆ: ಹಿಂವಇ 397 ಬಿಎಂಎಸ್ 2013 ದಿನಾಂಕ 05.09.2013ರ ಆದೇಶದನ್ವಯ ವಿದ್ಯಾರ್ಥಿ/ತಂದೆ/ತಾಯಿ/ಪೋಷಕರ ವಾರ್ಷಿಕ ವರಮಾನ ರೂ. 1.00 ಲಕ್ಷಗಳ ಮಿತಿಯೊಳಗಿರುವ ಎಲ್ಲಾ ಧರ್ಮಗಳ/ಜಾತಿಗಳ ಹಾಗೂ ಸಮುದಾಯಗಳ ವಿದ್ಯಾರ್ಥಿಗಳು (ಪ.ಜಾ./ಪ.ಪಂ. ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಮತ್ತು ರೂ. 2.50 ಲಕ್ಷಗಳ ಮಿತಿಯೊಳಗಿರುವ ಪ್ರವರ್ಗ-1 ರ ವಿದ್ಯಾರ್ಥಿಗಳು ನಿಗದಿತ ಶುಲ್ಕ ಮರುಪಾವತಿಗೆ ಅರ್ಹರಾಗಿರುತ್ತಾರೆ.
4. ಸರ್ಕಾರಿ ಆದೇಶ ಸಂಖ್ಯೆ:ಸಕಇ: 357 ಬಿ.ಎಂ.ಎಸ್. 2012 ದಿನಾಂಕ 07.11.2012ರ ಆದೇಶದನ್ವಯ ರೂ. 2.50ಲಕ್ಷಗಳ ಆದಾಯ ಮಿತಿಯೊಳಗಿರುವ ಪ್ರವರ್ಗ 1 ರ ವಿದ್ಯಾರ್ಥಿಗಳು ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಮತ್ತು ಗ್ರಂಥಾಲಯ ಶುಲ್ಕ ಮರುಪಾವತಿಗೆ ಅರ್ಹರಾಗಿರುತ್ತಾರೆ. ಹಾಗೆಯೇ, ಇತರೆ ಹಿಂದುಳಿದ ಸಮುದಾಯದ (ಪೋಷಕರ ವಾರ್ಷಿಕ ವರಮಾನ ರೂ. 1.00 ಲಕ್ಷದ ಮಿತಿಯಲ್ಲಿರುವ) ವಿದ್ಯಾರ್ಥಿಗಳು ಬೋಧನಾ ಮತ್ತು ಪ್ರಯೋಗಾಲಯ ಶುಲ್ಕ ಮರುಪಾವತಿಗೆ/ಶುಲ್ಕ ವಿನಾಯಿತಿಗೆ ಅರ್ಹರಾಗಿರುತ್ತಾರೆ. ಉಳಿದ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಪ್ರವೇಶಾತಿಯ ಸಂದರ್ಭದಲ್ಲಿ ಪಡೆಯತಕ್ಕದ್ದು.
5. ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಗ್ರಂಥಾಲಯ ಶುಲ್ಕ ಹಾಗೂ ಕ್ರೀಡಾ ಶುಲ್ಕಗಳನ್ನು ಸರ್ಕಾರ ನಿಗದಿಪಡಿಸಿರುವಂತೆ ವಿದ್ಯಾರ್ಥಿಗಳಿಂದ ಸಂಗ್ರಹಿಸತಕ್ಕದ್ದು (ಸರ್ಕಾರದ ಆದೇಶ ಸಂಖ್ಯೆ:ಸಕಇ:357: ಬಿ.ಎಂ.ಎಸ್ 2012 ದಿನಾಂಕ:22.11.2012).
6. ಸರ್ಕಾರಿ ಆದೇಶ ಸಂಖ್ಯೆ:ಸಕಇ 357 ಬಿ.ಎಂ.ಎಸ್.2012 ದಿ.22.11.2012ರ ಪ್ರಕಾರ ನಿಗದಿಪಡಿಸಿರುವ ಶುಲ್ಕಗಳನ್ನು ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡಿಕೊಳ್ಳಲು ಸರ್ಕಾರವು ಅವಕಾಶ ಕಲ್ಪಿಸಿದೆ. ಸದರಿ ಶುಲ್ಕಗಳನ್ನು ವಿದ್ಯಾರ್ಥಿಗಳಿಗೆ ಮರುಭರಿಕೆ ಮಾಡಲು ಸಂಬಂಧಿಸಿದ ಇಲಾಖೆಗಳಿಗೆ ನಿಗದಿತ ಸಮಯದೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

7. ಆಯಾ ಕಾಲೇಜಿನ ಪ್ರಾಂಶುಪಾಲರ ಖಾತೆಗೆ ನೇರವಾಗಿ ಜಮೆ ಮಾಡಿರುವ ಪ್ರವೇಶಾತಿ ಶುಲ್ಕದ ರಸೀದಿಯನ್ನು **UUCMS** ತಂತ್ರಾಂಶದಲ್ಲಿ ಆಫ್‌ಲೈನ್‌ನಲ್ಲಿ ನಿಗದಿತ ಸಮಯದೊಳಗೆ ಅಪ್‌ಲೋಡ್ ಮಾಡುವುದು. ವಿಶ್ವವಿದ್ಯಾನಿಲಯಕ್ಕೆ ಜಮೆ ಆಗಬೇಕಾಗಿರುವ ಪೂರ್ಣ ಪ್ರಮಾಣದ ಪ್ರವೇಶ ಶುಲ್ಕವನ್ನು ನೇರವಾಗಿ ಹಣಕಾಸು ಅಧಿಕಾರಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಖಾತೆ ಸಂಖ್ಯೆ:36954906897 ಗೆ ಜಮೆ ಮಾಡಿ, ಜಮೆ ಆಗಿರುವ ಬಗ್ಗೆ ಹಣಕಾಸು ವಿಭಾಗದಿಂದ ದೃಢೀಕರಿಸಿ ಸೂಕ್ತ ದಾಖಲೆಗಳೊಂದಿಗೆ ಮಾನ್ಯ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಪ್ರತ್ಯೇಕವಾಗಿ ಪ್ರತಿಗಳನ್ನು ಸಲ್ಲಿಸತಕ್ಕದ್ದು. ಬೇರೆ ಖಾತೆಗಳಿಗೆ ಪ್ರವೇಶ ಶುಲ್ಕವನ್ನು ಪಾವತಿಸಿದಲ್ಲಿ ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯವು ಪರಿಗಣಿಸುವುದಿಲ್ಲ.
8. ಪ್ರವೇಶ ಶುಲ್ಕ ವಿನಾಯಿತಿ ಪಡೆದಿರುವ ವಿದ್ಯಾರ್ಥಿಗಳ ಖಾತೆಗೆ ವಿದ್ಯಾರ್ಥಿವೇತನವು ಮಂಜೂರಾದ ಒಂದು ವಾರದೊಳಗೆ ಬಾಕಿ ಪ್ರವೇಶಾತಿ ಶುಲ್ಕವನ್ನು ಪಾವತಿಸುವಂತೆ ಸೂಚಿಸಿದೆ.

ಆದೇಶದ ಮೇರೆಗೆ,
9-5-24
ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಗೌರವ ಪ್ರತಿಗಳು:

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀದಿ,ಬೆಂಗಳೂರು-1
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಂ.16/ಡಿ, ದೇವರಾಜ ಅರಸು ಭವನ, 3ನೇ ಮಹಡಿ ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು-560052
3. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ತುಮಕೂರು.
4. ಆಡಳಿತಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಇಲಾಖೆ, ಎಂಜಿ ರಸ್ತೆ, ತುಮಕೂರು

ಪ್ರತಿಗಳು :

1. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ,ತುಮಕೂರು.
5. ಕ್ರೀಡಾ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
8. ಸಿಸ್ಟಂ ಅನಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು -ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಇ-ಮೇಲ್ ಕಳುಹಿಸುವುದು ಮತ್ತು ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು.
9. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
10. ಮಾನ್ಯಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
11. ಕಚೇರಿ ಪ್ರತಿ.